ಅಧ್ಯಕ್ಷರು :— ನೀವು ಈ ಸಬ್ಜೆಕ್ಟ್‌ನ್ನು ನಾಳೆ ರೈಸ್ ಮಾಡಿ, ಅಥವಾ ನಾಡಿದ್ದು ನಿಮ್ಮ ಸೀನಿಯಾರಿಟಿ ಪ್ರಕಾರ ಮಾಡಿ.

ವಿಷಯ: (ಈ) ಸದನದ ಸದಸ್ಯರ ಹಕ್ಕುಬಾಧ್ಯತೆಯನ್ನು ಮೇಲ್ಮನೆಯಲ್ಲಿ ಚರ್ಚೆ ಮಾಡುವ ಬಗ್ಗೆ.

ಶ್ರೀ ಎಸ್.ಎಸ್. ಪಾಟೀಲ್ :— ಸದನದ ನಾಯಕರು ಬಂದಿದ್ದಾರೆ. ಈ ಸದನದ ಹಕ್ಕು ಬಾಧ್ಯತೆ ಚರ್ಚೆ ಮಾಡಲು ಅಲ್ಲಿ ಅವಕಾಶ ಇದೆ ಎನ್ನುವುದನ್ನು ಹೇಳುತ್ತಿದ್ದೇನೆ. ಅದನ್ನು ಇವತ್ತು ದಯವಿಟ್ಟು ತಾವು ತೆಗೆದುಕೊಳ್ಳಬೇಕು. ನಾನು ಬೇರೆಯವರನ್ನೂ ಒಪ್ಪಿಸುತ್ತೇನೆ. ಏಕೆಂದರೆ ಈ ಸದನದ ಹಕ್ಕು ಬಾಧ್ಯತೆಯನ್ನು ಚರ್ಚೆ ಮಾಡುವ ಅಧಿಕಾರ ಅವರಿಗೆ ಇದೆ.? ಸದಸ್ಯರ ಹಕ್ಕುಬಾಧ್ಯತೆಗಳನ್ನು ಆ ಸದನದಲ್ಲಿ ಚರ್ಚೆ ಮಾಡಿದ್ದಾರೆ. ತಾವು ಕೂಡ ಇದರ ಬಗ್ಗೆ ಗಂಭೀರವಾಗಿ ತೆಗೆದುಕೊಳ್ಳಬೇಕು.

Mr. Speaker :— I have no comments on other House

ಶ್ರೀ ಪಿ.ಎಸ್. ಪೂಜಾರ್ :— ಸಾರ್ ಬಾಗಿಲಕೋಟೆ ಮುಳುಗಡೆಯಾಗುತ್ತಿದೆ.

ಅಧ್ಯಕ್ಷರು :— ತಾವು ದಯವಿಟ್ಟು ಕುಳಿತುಕೊಳ್ಳಿ. ಈಗ ಸೀನಿಯಾರಿಟಿ ಬಿಟ್ಟು ಹೋಗುವುದಾ? ದಯವಿಟ್ಟು ಹೇಳಿ. ಅವಕಾಶ ಕೊಡೋಣ.

ಶ್ರೀ ಆರಗ ಜ್ಞಾನೇಂದ್ರ :— ಬಾಗಲಕೋಟೆಯಲ್ಲಿ ನೀರು ಸೀನಿಯಾರಿಟಿ ಪ್ರಕಾರ ಮುಳುಗುತ್ತದೋ ಹೇಗೆ?

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :— ಬಾಗಲಕೋಟೆ ಮುಳುಗಡೆಯಾಗುತ್ತಿರುವ ಬಗ್ಗೆ ನೀವು ಸೀನಿಯಾರಿಟಿ ಪ್ರಕಾರ ಕೊಡಿ. ಆದರೆ ಯಾವುದು ತುರ್ತು ಇದೆ ಎನ್ನುವುದು ತಾವು ಗಮನಕ್ಕೆ ತೆಗೆದುಕೊಳ್ಳಿ. ಅಲ್ಲಿ ಬಾಗಲಕೋಟೆ ಮೂಳುಗಲು ಹೊರಟಿದೆ. ಹಿನ್ನೀರು ಬಂದು ಮುಳುಗುತ್ತಿದೆ. ಹಾಗಾದರೆ ನಾರು ಇನ್ನೊಂದು ವಾರ ತೆಗೆದುಕೊಳ್ಳೋಣವೇ? ಬಾಗಲಕೋಟೆ ಜನ ಹಾಗೆಯೇ ಇನ್ನೊಂದು ವಾರ ಮುಳುಗಡೆ ಆಗಿ ಇರು ಎಂದು ಹೇಳೋಣವೇ? ಮುಳುಗಡೆ ಆಗಿ ಹೋಗುತ್ತದೆ. ಅದನ್ನು ಪರಿಗಣನೆ ಮಾಡಬೇಕು.

ಅಧ್ಯಕ್ಷರು :— ಆಯಿತು, ಅವಕಾಶ ಕೊಡೋಣ.

ಶ್ರೀ ಎನ್. ಸಂಪಂಗಿ (ಬಾಗೇಪಲ್ಲಿ) :— ಮಾನ್ಯ ಅಧ್ಯಕ್ಷರೆ, ಇವತ್ತು ರಾಷ್ಟ್ರೀಯ ಕ್ರೀಡೆಗಳ ವಿಚಾರದಲ್ಲಿ ಮಾತನಾಡಲು ನಾನು ಸೂಚನೆ ಕೊಟ್ಟಿರುವುದು.

ಅಧ್ಯಕ್ಷರು :— ಇಲ್ಲ, ತಾವು ಮೊದಲು ಕೊಟ್ಟಿದ್ದು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ಸ್ ಚಿಕ್ಕಬಳ್ಳಾಪುರದ ಬಗ್ಗೆ.

ಶ್ರೀ ಎನ್. ಸಂಪಂಗಿ :— ಇವತ್ತು ರಾಷ್ಟ್ರೀಯ ಕ್ರೀಡೆಗಳ ಬಗ್ಗೆ ಮಾತನಾಡಬೇಕಾಗಿದೆ, ಎಕೆಂದರೆ ಪತ್ರಿಕೆಯಲ್ಲೂ ಬಂದಿದೆ.

ಅಧ್ಯಕ್ಷರು :— ಮಾತನಾಡಿವ ಪ್ರಶ್ನೆ ಇಲ್ಲ. ಶೂನ್ಯ ವೇಳೆಯಲ್ಲಿ ನೀವು ರೈಸ್ ಮಾಡಬಹುದು. ಮಂತ್ರಿಗಳಿಗೆ ಇಷ್ಟ ಇದ್ದರೆ ಉತ್ತರ ಕೊಡಬಹುದು ಇಲ್ಲದೆ ಇದ್ದರೆ ಇಲ್ಲ.

ಶ್ರೀ ಎನ್. ಸಂಪಂಗಿ :— ಮಾನ್ಯ ಮಂತ್ರಿಗಳು ಇದ್ದಾರೆ, ನ್ಯಾಷನಲ್ ಗೇಮ್ಸ್‌ನಲ್ಲಿ ಅವ್ಯವಹಾರ ನಡೆದಿದೆ.

ಅಧ್ಯಕ್ಷರು :— ನಮ್ಮ ರೂಲ್ಸ್ ಪ್ರಕಾರ ಹಾಗೆಯೇ ಇರುವುದು. ನಿನ್ನೆ ನೀವೇ ಒಪ್ಪಿಕೊಂಡು ಬಂದಿದ್ದೀರಲ್ಲಾ, ನಮಗೆ ಆನ್ಸರ್ ಬೇಕಾಗಿಲ್ಲ ಎಂದು.

ಶ್ರೀ ಎನ್. ಸಂಪಂಗಿ :— 1997ನೇ ಇಸವಿಯಲ್ಲಿ, ...

(ಗೊಂದಲ)

ಅಧ್ಯಕ್ಷರು :— ನೀವು ಹಾಗೆ ಹೇಳಲಿಲ್ಲ. ನಮಗೆ ಉತ್ತರ ಬೇಕಾಗಿಲ್ಲ. ಪುನ: ರೈಸ್ ಮಾಡುತ್ತೇವೆ ಎಂದು ಹೇಳಿದಿರಿ.

ಶ್ರೀ ಎ. ರಾಮದಾಸ್ :— ಉತ್ತರ ಇಲ್ಲದಿದ್ದರೆ ಹೇಗೆ.

ಅಧ್ಯಕ್ಷರು :— ನಿನ್ನೆ ನೀವು 10-12 ಜನ ಸದಸ್ಯರು ಬಂದು ಏನು ಹೇಳಿದಿರಿ ನಾವು ರೈಸ್ ಮಾಡುತ್ತೇವೆ ನಮಗೆ ಉತ್ತರ ಬೇಕಾಗಿಲ್ಲ ಎಂದು ಹೇಳಿದಿರಿ. ಅದನ್ನು ಏಕೆ ಇವತ್ತು ತಿರುಗಾ ಮುರುಗಾ ಮಾಡುತ್ತಿದ್ದೀರಿ? ಮಂತ್ರಿಗಳು ಇಷ್ಟಪಟ್ಟರೆ ಅವರು ಉತ್ತರ ಕೊಡಬಹುದು.

ವಿಷಯ: (ಉ) 1997ನೇ ಇಸವಿಯಲ್ಲಿ ರಾಷ್ಟ್ರೀಯ ಕ್ರೀಡೆಗಳನ್ನು ನಡೆಸುವ ಸಂದರ್ಭದಲ್ಲಿ ಆಗಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ.

ಶ್ರೀ ಎನ್. ಸಂಪಂಗಿ :— 1997ನೇ ಇಸವಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಬಹಳ ಒಂದು ಸಂಭ್ರಮದಿಂದ ರಾಷ್ಟ್ರೀಯ ಕ್ರೀಡೆಗಳನ್ನು ನಡೆಸಿದರು. ರಾಷ್ಟ್ರೀಯ ಕ್ರೀಡೆಗಳನ್ನು ನಡೆಸುವಂತಹ ಸಂದರ್ಭದಲ್ಲಿ ಬಹಳ ಅವ್ಯವಹಾರ ಆಗಿದೆ. ಮೇಲು